ನಟನಾಗುವ ಆಸೆ ಆಗಲೇ ಹುಟ್ಟಿಕೊಂಡಿತ್ತು'. ಈ ಬಣ್ಣದ ಕನಸನ್ನು ಜೊತೆಗಿಟ್ಟುಕೊಂಡೇ ಬಿ.ಎಸ್‌ಸಿ. ಮುಗಿಸಿದ ನಂತರ ಬೆಂಗಳೂರಿಗೆ ಕಾಲಿಟ್ಟರು ರಿತ್ವಿಕ್. ಜೀವನಕ್ಕೆಂದು ಎಂಎನ್‌ಸಿಯಲ್ಲಿ ಕೆಲಸಕ್ಕೆ ಸೇರಿದ ಅವರು, ತಮ್ಮ ಕನಸನ್ನು ಅರಸಿ ಹಲವು ದಿನ ಅಲೆದಾಡಿದರು ಕೂಡ. ಈ ಅಲೆದಾಟ ಕೊನೆಗೂ ಅವಕಾಶ ತಂದಿತ್ತು. ಸಿನಿಮಾಗಳಲ್ಲಿ ಜೂನಿಯರ್ ಕಲಾವಿದನಾಗಿ ನಟಿಸಿದರು. ಹಾಗಿದ್ದಾಗಲೇ 'ಅನುರೂಪ' ಧಾರಾವಾಹಿಯಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತು. ನಂತರ 'ಆ ಎರಡು ವರ್ಷಗಳು', 'ಗಿಫ್ಟ್ ಬಾಕ್ಸ್' ಸಿನಿಮಾಗಳಲ್ಲಿ ನಟಿಸಿದರು. ನಿರೀಕ್ಷಿಸಿದ ಯಶಸ್ಸು ಸಿಗದಿದ್ದರೂ ಆ ಸಿನಿಮಾಗಳು ಅವರಲ್ಲಿನ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿದ್ದವು. ಇದೇ ಸಮಯದಲ್ಲಿ ರಂಗಭೂಮಿಯ ಸಹವಾಸ ರಿತ್ವಿಕ್ ಕನಸಿಗೆ ಜೀವ ತುಂಬಿತ್ತು.

"ಜೂನಿಯರ್ ಆರ್ಟಿಸ್ಟ್ ಆಗಿ ಕೆಲಸ ಮಾಡಿದ ಮೇಲೆ, ಹೊಸತು ಕಲಿಯುವ ಹಂಬಲದಲ್ಲಿ ರಂಗಪಯಣ ತಂಡ ಸೇರಿದೆ. ಆಗ, 'ಒಂದಾನೊಂದು ಕಾಲದಲ್ಲಿ' ಸಿನಿಮಾವನ್ನು ನಾಟಕ ಮಾಡುವ ತಯಾರಿ ನಡೆಯುತ್ತಿತ್ತು. ಅದರಲ್ಲಿ ನನಗೆ ನಟ ಶಂಕರ್ ನಾಗ್ ಅವರು ನಿರ್ವಹಿಸಿದ್ದ ಪಾತ್ರ ಕೊಟ್ಟುಬಿಟ್ಟರು. ನಟಿಸುವ ಆತ್ಮವಿಶ್ವಾಸ ಇದ್ದರೂ, ಜನರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎಂಬ ಹಿಂಜರಿಕೆ. ನನಗೆ ಯಾವುದೇ ಅನುಭವ ಇಲ್ಲ, ಇಷ್ಟು ದೊಡ್ಡ ಪಾತ್ರ ಕೊಡುತ್ತಿದ್ದೀರಲ್ಲ ಎಂದು ರಾಜಗುರು ಹೊಸಕೋಟೆ ಅವರನ್ನು ಕೇಳಿದೆ. ಅವರು ಹೇಳಿದ್ದು ಒಂದೇ ಮಾತು. 'ನಿಮ್ಮ ಕಣ್ಣು ಮಾತಾಡುತ್ತೆ. ನೀವು ಈ ಪಾತ್ರ ಮಾಡುತ್ತೀರ, ಮಾಡಿ' ಎಂದು. ಆ ನಾಟಕ ಆಮೇಲೆ 21 ಶೋಗಳನ್ನು ಕಂಡಿತು. ಜನರು ಬಾಯ್ತುಂಬ ಹೊಗಳಿದರು" ಎಂದು ಹೆಮ್ಮೆಯಿಂದ ಹೇಳುತ್ತಾರೆ ರಿತ್ವಿಕ್.

'ರಂಗಭೂಮಿ ಶಿಸ್ತನ್ನು ಕಲಿಸಿತು. ಎಲ್ಲರೂ ಒಂದೇ ಎಂಬ ಭಾವ ತುಂಬಿತು. ವಿನಮ್ರತೆ ಕಲಿಸಿತು' ಎನ್ನುವ ರಿತ್ವಿಕ್, ಅದೇ ಶಿಸ್ತನ್ನು ತಮ್ಮ ಜೀವನದ ಪ್ರತಿ ಹಂತದಲ್ಲೂ ಅಳವಡಿಸಿಕೊಂಡಿರುವುದಾಗಿ ಹೇಳುತ್ತಾರೆ. ರಂಗಭೂಮಿಯಿಂದ ಕಿರುತೆರೆ ಮತ್ತೆ ಕೈಬೀಸಿ ಕರೆದಿತ್ತು. 'ಗಿಣಿರಾಮ' ಧಾರಾವಾಹಿಯಲ್ಲಿ ರಗಡ್ ಲುಕ್‌ನಲ್ಲಿ ತಮ್ಮದೇ ಮ್ಯಾನರಿಸಂನಿಂದ ಮನೆ ಮಾತಾದ ಅವರು, 'ಉತ್ಸವ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. 'ಕಲ್ ಸಕ್ರೆ' ಎಂಬ ಸಿನಿಮಾ ಚಿತ್ರೀಕರಣವೂ ಮುಗಿದಿದ್ದು, ಮತ್ತೊಂದು ಸಿನಿಮಾ ಕೂಡ ಅವರ ಕೈಯಲ್ಲಿದೆ.

'ನಟನೆ ನನ್ನ ಪಾಲಿಗೆ ಜೀವನ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಮನರಂಜನೆ ನೀಡಬೇಕು. ಅದೇ ನನ್ನ ಗುರಿ' ಎಂದು ಹೇಳುವ ಅವರಿಗೆ, ದೇಶವನ್ನು ಕಾಯುವ ಸಿಪಾಯಿಯ ಪಾತ್ರದಲ್ಲಿ ತಮ್ಮನ್ನು ತಾವು ಕಾಣುವ ಇಚ್ಛೆ. ■



# ಶರಣ್ಯಾಗೆ ಗೋಲ್ಡನ್ ಚಾನ್ಸ್



'ಸಿನಿಮಾರಂಗದ ಯಾವುದೇ ಹಿನ್ನೆಲೆ, ಸಂಪರ್ಕ ಇಲ್ಲದೆ ಇಲ್ಲಿಗೆ ಬಂದು ಗುರುತಿಸಿಕೊಳ್ಳುವುದು ಸುಲಭದ ಮಾತಲ್ಲ. ಅನಿಶ್ಚಿತತೆ ಇರುವ ಚಿತ್ರರಂಗವನ್ನು ತಮ್ಮ ಭವಿಷ್ಯವನ್ನಾಗಿ ಆರಿಸಿಕೊಳ್ಳುವುದು ನಿಜಕ್ಕೂ ಸವಾಲಿನ ಕೆಲಸ. ಆದರೆ ಇಲ್ಲಿ ತಾಳ್ಮೆ ತುಂಬಾ ಮುಖ್ಯ' ಎನ್ನುವ ನಟಿ ಶರಣ್ಯಾ ಶೆಟ್ಟಿಗೆ ಇದೀಗ ಒಂದೊಂದೇ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ.

ಸದ್ಯ ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದಲ್ಲಿಯೂ ನಟಿಸುವ ಅವಕಾಶ ಶರಣ್ಯಾ ಪಾಲಿಗೆ ಒದಗಿಬಂದಿದೆ.

'ಗಟ್ಟಿಮೇಳ' ಧಾರಾವಾಹಿಯಲ್ಲಿ ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದ ಶರಣ್ಯಾ ಶೆಟ್ಟಿ ಆನಂತರ ಸಿನಿಮಾರಂಗಕ್ಕೆ ಕಾಲಿಟ್ಟು, 'ಹುಟ್ಟುಹಬ್ಬದ ಶುಭಾಶಯಗಳು', '1980', 'ಪೆಂಟಗನ್' ಸಿನಿಮಾಗಳಲ್ಲಿ ಅಭಿನಯಿಸಿದರು. ಸದ್ಯ 'ಕೃಷ್ಣಂ ಪ್ರಣಯ ಸಖಿ' ಸಿನಿಮಾಗೆ ಎರಡನೇ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಇದರ ಬೆನ್ನಲ್ಲೇ ಅನೀಶ್ ತೇಜೇಶ್ವರ್ ನಟಿಸುತ್ತಿರುವ ಹೊಸ ಸಿನಿಮಾಗೂ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಸಿನಿಮಾ ಬಗ್ಗೆ ಆಕರ್ಷಣೆ ತುಂಬಿಸಿಕೊಂಡಿದ್ದ ಶರಣ್ಯಾಗೆ ತಾವೂ ಹೀರೊಯಿನ್ ಆಗಬೇಕೆಂಬ ಬಯಕೆ ಓದುವ ದಿನಗಳಲ್ಲಿಯೇ ಇತ್ತು. ಆ ಬಯಕೆಯ ಬೆನ್ನುಬಿದ್ದು ಸಿನಿಮಾರಂಗ ಪ್ರವೇಶಿಸಿದವರು.

'ಚಿಕ್ಕವಳಿದ್ದಾಗ, ಶೂಟಿಂಗ್ ಸಮಯದಲ್ಲಿ ಸೇರುವ ಜನರ ನಡುವೆ ಇರುವವರನ್ನೇ ಗುರುತಿಸಿ ನಿರ್ದೇಶಕರು ಹೀರೊಯಿನ್ ಮಾಡುತ್ತಾರೆ ಎಂದುಕೊಂಡಿದ್ದೆ. ಹೀಗಾಗಿ ಎಲ್ಲೇ ಚಿತ್ರೀಕರಣ ನಡೆಯುತ್ತಿದ್ದರೂ ನಾನೂ ನೋಡುತ್ತಾ ನಿಲ್ಲುತ್ತಿದ್ದೆ. ಚಿತ್ರೀಕರಣ ಕಂಡ ನಂತರ ಅದನ್ನು ಸಿನಿಮಾದಲ್ಲಿ ನೋಡಿದಾಗ ನನಗೆ ಅದು ಮ್ಯಾಜಿಕ್ ಅನಿಸುತ್ತಿತ್ತು. ಆ ಕ್ಷಣದಲ್ಲಿ ನನಗೂ ನಟಿಯಾಗುವ ಆಸೆ ಹುಟ್ಟಿಕೊಂಡಿತ್ತು' ಎಂದು ತಮ್ಮ ಹಿಂದಿನ ದಿನಗಳನ್ನು ಮೆಲುಕು ಹಾಕಿದ್ದಾರೆ.

'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಬಗ್ಗೆ ಮಾತನಾಡುತ್ತಾ, 'ಸಿನಿಮಾ ಪ್ರೊಡಕ್ಷನ್ ಹೌಸ್‌ನಿಂದ ಕರೆ ಬಂದಾಗ, ಅದು ಪ್ರ್ಯಾಂಕ್ ಕರೆ ಎಂದುಕೊಂಡಿದ್ದೆ. ಆಮೇಲೆ ನಿರ್ದೇಶಕರೊಂದಿಗೆ ಮಾತನಾಡಿದಾಗ ನನಗಾದ ಖುಷಿ ಅಷ್ಟಿಷ್ಟಲ್ಲ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ■